# ಅಂಬೆಗಾಲಿಕ್ಕುತಲಿ ಬಂದ ಗೋವಿಂದ

1. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi
2. **Ref.:** Purandara Sahitya Darshana, Samputa 2, Adhyatma Darshana edited by Prof. S.K. Ramachandra Rao
3. **Note:** Lyrics in both the above references are same and the singer has followed these lyrics.

ರಾಗ : ಧನ್ಯಾಸಿ ತಾಳ : ಅಟ್ಟ

ಅಂಬೆಗಾಲಿಕ್ಕುತಲಿ ಬಂದ ಗೋವಿಂದ ॥ ಪ ॥
ಅಂಬುಜನಾಭ ದಯದಿಂದ ಎನ್ನ ಮನೆಗೆ ॥ ಅಪ ॥

ಜಲಚರ ಜಲವಾಸ ಧರಣಿಧರ ಮೃಗರೂಪ
ನೆಲನಳೆದು ಮೂರಡಿ ಮಾಡಿ ಬಂದ
ಕುಲನಾಶ ವನವಾಸ ನವನೀತ ಚೋರನಿವ
ಲಲನೆಯರ ವ್ರತ ಭಂಗ ವಾಹನ ತುರಂಗ ॥ ೧ ॥

ಕಣ್ಣು ಬಿಡುವನು ತನ್ನ ಬೆನ್ನ ತಗ್ಗಿಸುವನು
ಮಣ್ಣು ಕೆದರಿ ಕೋರೆ ಬಾಯ ತೆರೆದು
ಚಿಣ್ಣ ಭಾರ್ಗವ ಲಕ್ಷ್ಮಣನಣ್ಣ ಬೆಣ್ಣೆಯ ಕಳ್ಳ
ಮಾನವ ಬಿಟ್ಟು ಕುದುರೆಯನೇರಿದ ॥ ೨ ॥

ನೀರ ಪೊಕ್ಕನು ಗಿರಿಯ ನೆಗಹಿ ಧರಣಿಯ ತಂದ
ನರಮೃಗ ಬಲಿಬಂಧ ಕೊರಳು ಗೊಯಿಕ
ಶರ ಮುರಿದೊರಳೆಳೆದು ನಿರವಾಣಿ ಹಯ ಹತ್ತಿ
ಪುರಂದರ ವಿಠಲ ಮನೆಗೆ ತಾ ಬಂದ ॥ ೩ ॥

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿ:**

ಈ ಪದದಲ್ಲಿ ಮೂರು ನುಡಿಗಳಲ್ಲಿ ಪ್ರತ್ಯೇಕವಾಗಿ ಹತ್ತು ಅವತಾರಗಳ ಚಿತ್ರಣವಿದೆ.

**ಒರಳೆಳೆದು** – ಯಮಳಾರ್ಜುನಭಂಗದ ಪ್ರಸಂಗ (ಕೃಷ್ಣಾವತಾರ).

**ನಿರವಾಣಿ** – ನಿರ್ವಾಣಿ, ಬೆತ್ತಲೆ (ಬೌದ್ಧಾವತಾರ).

**Classification:** Keerthane
**Ankita:** purandara vittala
**Location:** NA
**Category:** Dashavatara
**Sub-Category:** govinda, Krishna, daya, mane, vrata, kannu, kudure, baayi, bhumi, dashavatara,
**Pravachana:** NA
**Explanation:** NA